### ವಿಶೇಷವಾಯಿತು ‘ಸವಿನೆನಪು’

‘ಸುಧಾ’ದಲ್ಲಿ ಬರುತ್ತಿದ್ದ ಕಾಮಿಕ್ಸ್, ನೀತಿ ಕಥೆಗಳು, ಪುಟ್ಟ ಪುಟ್ಟ ಕವಿತೆಗಳನ್ನು ಓದುತ್ತಾ, ಬರೆಯುವ ಹವ್ಯಾಸ ಬೆಳೆಸಿಕೊಂಡೆ. ಮುಂದೆ ಕಥೆಗಳು, ಧಾರಾವಾಹಿ, ಪ್ರವಾಸ ಕಥನ, ಆರೋಗ್ಯ, ಸವಿರುಚಿ ಇತ್ಯಾದಿ ಬರಹಗಳನ್ನು ಓದಲು ಶುರು ಮಾಡಿದೆ.

‘ಸವಿನೆನಪು’ ಅಂಕಣದಲ್ಲಿ ನಾನು ಓದಿದ ಶಾಲೆಯ ಕುರಿತ ಬರಹ ಪ್ರಕಟವಾಗಿತ್ತು. ಆ ಬರಹ ಓದಿ, ಮರೆಯಾಗಿದ್ದ ನನ್ನ ಶಾಲಾ ಸ್ನೇಹಿತರು ಭೇಟಿಯಾಗುವ ಸಂದರ್ಭ ಒದಗಿ ಬಂದಿತು. ಇದಕ್ಕಾಗಿ ‘ಸುಧಾ’ಳಿಗೆ ನನ್ನ ಧನ್ಯವಾದಗಳು.

ಈಗಲೂ ನನ್ನ ಬಳಿ 30 ವರ್ಷಗಳ ಹಿಂದಿನ ಅನೇಕ ಆಸಕ್ತಿದಾಯಕ ಲೇಖನಗಳ ಸಂಗ್ರಹವಿದೆ.

—ಶುಭಾ ದಿವಾಕರ್, ಬೆಂಗಳೂರು

### ಹೆಚ್ಚಿದೆ ಸೌಂದರ್ಯ

ನನಗೆ ತಿಳಿವಳಿಕೆ ಬಂದಾಗಿನಿಂದ ‘ಸುಧಾ’ ನನ್ನ ಜೊತೆಗಿದ್ದಾಳೆ. ‘ಮಹಾಭಾರತ’ ಧಾರಾವಾಹಿಯಾಗಿ ಪ್ರಕಟವಾದಾಗ ಪ್ರತಿ ವಾರ ಸಂಗ್ರಹಿಸಿ ನನ್ನ ತಂದೆಗೆ ಓದಲು ಕೊಟ್ಟಿದ್ದೆ. ನನ್ನ ತಂದೆ ಅದನ್ನು ತಮ್ಮ ಸ್ನೇಹಿತರೆಲ್ಲರಿಗೂ ತೋರಿಸಿ ಖುಷಿಯಿಂದ ಓದಿದರು. ಜಾಣರ ಪೆಟ್ಟಿಗೆ, ಪ್ರಸ್ತುತ ವಿದ್ಯಮಾನದ ಮುಖಪುಟ, ವಿಜ್ಞಾನ, ಸೆಲೆಬ್ರಿಟಿ, ಫ್ಯಾಷನ್... ಹೀಗೆ ಪ್ರತಿ ಪುಟಗಳು ವಿಭಿನ್ನ.

ಈಗಲೂ ‘ಸುಧಾ’ ತನ್ನ ಸೌಂದರ್ಯವನ್ನು ಹಾಗೇ ಉಳಿಸಿಕೊಂಡಿದೆ. ‘ಸುಧಾ’ ಜೊತೆಗಿನ ನನ್ನ ಬಾಂಧವ್ಯ ಎಂದಿಗೂ ಕೊನೆಯಾಗದ್ದು. ಇತ್ತೀಚೆಗೆ ಪ್ರಾರಂಭವಾದ ‘ಮರಗಳ ಕಥೆ’ ಪ್ರಕೃತಿಯ ಕಾಳಜಿಯ ಪುಟ ತುಂಬಾ ಚೆನ್ನಾಗಿದೆ. ಗೊತ್ತಿಲ್ಲದ, ನಶಿಸಿ ಹೋಗುತ್ತಿರುವ ಮರ ಗಿಡಗಳ ಪರಿಚಯ ಸೊಗಸಾಗಿ ಮೂಡಿಬರುತ್ತಿದೆ

—ಪ್ರಮೀಳಾ ಷಣ್ಮುಖ, ಮೈಸೂರು

### ‘ಸುಧಾ’ ಎಂದರೆ ಪುಳಕ

ಆಗಿನ್ನೂ ನನಗೆ ಮೂರ್ನಾಲ್ಕು ವರ್ಷ. ಕನ್ನಡ ವರ್ಣಮಾಲೆ ಓದಲು ಸಹ ಬರುತ್ತಿರಲಿಲ್ಲ. ಆಗ ನಮ್ಮನೆಯಲ್ಲಿ ‘ಸುಧಾ’ ತರಿಸುತ್ತಿದ್ದರು. ತಲೆಗೆ ಎಣ್ಣೆ ನೀರು ಹಾಕಿಸಿಕೊಂಡ ಮೇಲೆ ಬಹಳ ಸುಸ್ತಾಗುತ್ತಿತ್ತು. ಆಗ ನನ್ನ ತಾಯಿ, ಸುಧಾರಿಸಿಕೋ ಎನ್ನುತ್ತಿದ್ದರು. ನಾನು, ‘ಸುಧಾ ಕೊಡು ಸುಧಾರಿಸಿಕೊಳ್ಳುತ್ತೇನೆ’ ಎಂದು ಕೇಳಿ ಪುಟಗಳನ್ನು ತಿರುವಿ ಹಾಕುತ್ತಿದ್ದೆ. ಆಗಿನಿಂದ ಶುರುವಾದ ‘ಸುಧಾ’ ಓದುವಿಕೆ ಇಂದಿಗೂ ಮುಂದುವರೆದಿದೆ. 15 ವರ್ಷಗಳ ಹಿಂದೆ ಉತ್ತರಾಖಂಡದಲ್ಲಿ ವಾಸವಾಗಿದ್ದ ನಾನು ಆ ಅವಧಿಯಲ್ಲಿ ಆನ್‌ಲೈನ್‌ನಲ್ಲಿ ಪತ್ರಿಕೆ ಓದುತ್ತಿದ್ದೆ. ನನ್ನ ಕಿರು ಲೇಖನಗಳು ಪ್ರಕಟವಾದಾಗ ಏನೋ ಪುಳಕ ನನಗೆ. ‘ಸುಧಾ’ ಎಂದೆಂದಿಗೂ ನನ್ನ ಒಡನಾಡಿ.

—ಆಶಾ ಅಪ್ರಮೇಯ, ದಾವಣಗೆರೆ



‘ಚಲಿಸುವ ಮೋಡಗಳು’ ಸಿನಿಮಾ ದೃಶ್ಯವೊಂದರಲ್ಲಿ ‘ಸುಧಾ’ ಹಿಡಿದಿರುವ ನಟಿ ಸರಿತಾ

ಫೋಟೊ ಕಳುಹಿಸಿದವರು: ವಿನು ಗಂಗೆ

## ಸುಧಾ 60 ವಜ್ರ ಮಹೋತ್ಸವ

## ‘ಸುಧಾ’ ಜೊತೆಗಿನ ಓದುಗರ ಒಡನಾಟ

### ಅವಿರತ ಸ್ನೇಹ ನಮ್ಮದು

60ರ ದಶಕದಲ್ಲಿ ನಮ್ಮ ತಂದೆಗೆ ಅರಸೀಕೆರೆಗೆ ವರ್ಗಾವಣೆಯಾಗಿತ್ತು. ನಾನು ಆಗ 3ನೇ ತರಗತಿ. ಪಕ್ಕದ ಮನೆಯ ಗೋಪಾಲಾಚಾರ್ ಎಂಬುವರು ‘ಸುಧಾ’ ಪತ್ರಿಕೆ ತರಿಸುತ್ತಿದ್ದರು. ಅದರಲ್ಲಿ ಡಾಬೂ ಚಿತ್ರಕಥೆ ಪ್ರಕಟವಾಗುತ್ತಿತ್ತು. ಹಿಮಮಾನವನೊಂದಿಗೆ ಹೋರಾಟ, ಚಂದ್ರಲೋಕ ಯಾತ್ರೆಯಿಂದ ಪ್ರಾರಂಭಗೊಂಡ ನನ್ನ ಮತ್ತು ‘ಸುಧಾ’ ಒಡನಾಟ ಅವಿರತವಾಗಿ ಮುಂದುವರೆದಿದೆ.

80–90ರ ದಶಕದಲ್ಲಿ ಸಂಜೆ ಸರ್ಕಾರಿ ಗ್ರಂಥಾಲಯ ಬಾಗಿಲು ತೆರೆಯುವ ಮುನ್ನವೇ ಹೋಗಿ ಕಾದು ಕುಳಿತು, ಬೀಗ ತೆಗೆದ ತಕ್ಷಣ ಓಡಿಹೋಗಿ ‘ಸುಧಾ’ ಓದುತ್ತಿದ್ದ ಮಜವೇ ಮಜ. ಕ್ರಮೇಣ ನಾನೂ ಕಥೆ ಕವನ, ವಿಡಂಬನೆ ಬರೆಯತೊಡಗಿದೆ. ನನ್ನನ್ನು ಲೇಖಕನನ್ನಾಗಿ ಮಾಡಿದ ಹೆಗ್ಗಳಿಕೆ ‘ಸುಧಾ’ದ್ದು.

—ವಿಜಯ್ ಹೆಮ್ಮಿಗೆ, ಮೈಸೂರು

### ಜ್ಞಾನದ ಕಣಜ

1990ರಲ್ಲಿ ಪ್ರಥಮ ಬಾರಿಗೆ ‘ಸುಧಾ’ ಕೊಂಡು ಓದಿದೆ. ಅಂದು ನನಗೆ ನೌಕರಿ ಸಿಕ್ಕ ಸಂಭ್ರಮ, ಜೊತೆಗೆ ‘ಸುಧಾ’ಗೆ ಚಂದಾದಾರ ಆದ ಖುಷಿ. ಪದಬಂಧ, ಧಾರಾವಾಹಿ, ಆರೋಗ್ಯ ಮಾಹಿತಿ, ಆಸಕ್ತಿದಾಯಕ ಬರಹಗಳು ನನಗಿಷ್ಟ. ನನ್ನೊಂದಿಗೆ ನನ್ನ ಮಗ, ಮಗಳು, ಹೆಂಡತಿ ಕೂಡ ‘ಸುಧಾ’ ಓದುಗರೇ. ನನ್ನ ಜ್ಞಾನಭಂಡಾರ ಹೆಚ್ಚಲು ಈ ಓದೇ ಕಾರಣ. ಯುಗಾದಿ ವಿಶೇಷಾಂಕಗಳನ್ನೂ ತಪ್ಪದೇ ಓದುತ್ತಿದ್ದೇನೆ.

—ಪರಸಪ್ಪ ಬಂತಿ, ಶಿರಹಟ್ಟಿ, ಗದಗ

### ಬರಹಗಳ ಹೂರಣ

‘ಸುಧಾ’ ಕನ್ನಡಿಗರದ್ದು ಎಂಬ ಹೆಮ್ಮೆ. ಇತಿಹಾಸ, ಸಾಹಿತ್ಯ, ಸಿನಿಮಾರಂಗ, ನಗೆಬರಹ, ಮಕ್ಕಳ ಕಥೆ... ಎಲ್ಲವೂ ಅಡಕವಾದ ಕಣಜ ‘ಸುಧಾ’. ಎಲ್ಲವೂ ಸಂಗ್ರಾಹ್ಯ ಸಂಚಿಕೆಗಳೇ ಎನಿಸುತ್ತದೆ ನನಗೆ.

—ಕೆ. ಹರೀಶ್ ಕುಮಾರ್, ಪುತ್ತೂರು

### ‘ನಾಸಾ’ ಸಹೋದರಿಯರ ಅಭಿಮಾನ

ನಾಲ್ವರು ಸಹೋದರಿಯರಾದ ನಾವು ‘ನಾಸಾ ಸಹೋದರಿಯರು’ ಎಂದೇ ಕುಟುಂಬದಲ್ಲಿ ಪ್ರಸಿದ್ಧ. ‘ನಾಸಾ’ ಎಂದರೆ ನಾಗು, ಅಂಬು, ಸುಮ, ಅನು (ಎನ್,ಎ,ಎಸ್,ಎ)’.
ನಮ್ಮೆಲ್ಲರ ಪ್ರೀತಿಯ ಮತ್ತೊಬ್ಬ ಸಹೋದರಿ, ಈಗ ಅರವತ್ತರ ಹದಿಹರೆಯದಲ್ಲಿ ನಳನಳಿಸಿ ನಗು ನಗುತ್ತಿರುವ ‘ಸುಧಾ’.
ನಮ್ಮ ಪ್ರೀತಿಯ ‘ಸುಧಾ’,
ಆಗ ನೀನು ಬಂದೊಡನೆ...
ನಮ್ಮ ನಮ್ಮಲ್ಲಿ ಮೊದ್ಲು ನಾನು ಓದಬೇಕೆಂದು ನಡೀತಿದ್ದ ಕಿತ್ತಾಟ ನಿಂಗೇ ಗೊತ್ತಲ್ವಾ, ನೀನೇ ಪ್ರತ್ಯಕ್ಷ ನೋಡಿದ್ದೀಯ!!
ಅಂದಿನಿಂದ ನಮ್ಮೊಂದಿಗೇ ಬೆಳೆದು... ನಮ್ಮೆಲ್ಲರ ಪ್ರೀತಿಯ ಸಹೋದರಿಯಾಗಿ, ಕುಟುಂಬದವರಿಗೆಲ್ಲ ಮುದ ನೀಡುತ್ತಿದ್ದೀಯ.
ನಿನಗೆ ಅರವತ್ತರ ಹರೆಯದ ಹೃನ್ಮನಪೂರ್ವಕ ಹಾರ್ದಿಕ ಶುಭಾಶಯಗಳು...
ಹೀಗೇ ವೈಭವಯುತವಾಗಿ ಮುಂದುವರೆಯುತ್ತಲೇ ಇರು ಎಂದು ಹಾರೈಸುವ,

ನಿನ್ನ ‘ನಾಸಾ’ ಸಹೋದರಿಯರು, ಬೆಂಗಳೂರು